ಒಂದಿಷ್ಟು ಹೊತ್ತು ಮೌನ. ಇಬ್ರೂ ಎಂಥದೂ ಮಾತಾಡ್ಲಿಲ್ಲ. 'ಏಳಿ... ಸ್ನಾನ ಮಾಡಿ. ನಿಮಿಗೆ ಇಷ್ಟವಾದ ಅವರೇಕಾಳು ಉಪ್ಪಿಟ್ಟು ಮಾಡ್ತೇನೆ. ಹೇಗೂ ಇವತ್ತು ಸಂಡೇ. ನಿಮ್ಮ ಜನ್ಮ ನಕ್ಷತ್ರ ಬೇರೆ. ದೇವಸ್ಥಾನಕ್ಕೆ ಹೋಗಿ ಹೊರಗಡೆ ಎಲ್ಲಾದ್ರೂ ಊಟ ಮಾಡಿ ಬರುವಾ' ಅಂದಳು ಸ್ನೇಹಾ. ಒಂದಿಷ್ಟು ಹೊತ್ತು ಅವ ತಲೆ ಅಡಿಗೆ ಹಾಕಿ ಕೂತಿದ್ದ. ಮತ್ತೆ ಎದ್ದು ಸ್ನಾನಕ್ಕೆ ಅಂತ ಹೊರಟ.

ದಿನೇಶನಿಗೆ ಮೈಗೆ ನೀರು ಹಾಕಿಕೊಳ್ತಾ ಇದ್ರೂ ಹಳೆಯದ್ದೇ ಯೋಚನೆ. ಎಂಥದೆಲ್ಲ ಆಗಿ ಹೋಯಿತು ತನ್ನ ಬದುಕಿನಲ್ಲಿ? ಅಂತ ಎಣಿಸಿದ.

ಚಿಕ್ಕವನಾಗಿದ್ದಾಗಿನಿಂದ ದಿನೇಶನಿಗೆ ಆಟ ಓಟ ಅಂದರೆ ಅಷ್ಟಕ್ಕಷ್ಟೇ. ಆದರೆ, ಅವನ ದುರದೃಷ್ಟಕ್ಕೆ ಬೇರೆ ಯಾವುದೇ ಕೋರ್ಸಿಗೆ ಸೀಟು ಸಿಕ್ಕಿರಲಿಲ್ಲ. ಬಿಪಿಎಡ್‌ಗೆ ಸಿಕ್ಕಿತ್ತು. ಅದು ಮುಗಿದ ಅನಂತರ ಪಟ್ಟಣದ ಪ್ರೈವೇಟ್ ಕಾಲೇಜಿನ ಮ್ಯಾನೇಜ್‌ಮೆಂಟಿನ ಸೆಕ್ರೆಟರಿ, 'ನೀನು ಮುಂದೆ ಎಂಪಿಎಡ್ ಮಾಡು. ನಿಂಗೆ ನಮ್ಮ ಕಾಲೇಜಿನಲ್ಲೇ ಕೆಲಸ ಕೊಡಿಸ್ತೇನೆ. ಕೆಲವೇ ವರ್ಷಗಳಲ್ಲಿ ಪರ್ಮನೆಂಟ್ ಮಾಡಿಸುವ ಜವಾಬ್ದಾರಿ ನಂಗೆ ಬಿಡು' ಅಂತ ಹೇಳಿದ್ದ. ಇವ ಅದನ್ನೂ ಮಾಡಿಕೊಂಡ. ಸೆಕ್ರೆಟರಿ ಹೇಳಿದ ಮಾತಿನ ಹಾಗೇ ಅವನದ್ದೇ ಕಾಲೇಜಿನಲ್ಲಿ ಪಿಡಿ ಆಗಿ ಕೆಲಸ ಕೊಡಿಸಿದ. ನೋಡ್ಲಿಕ್ಕೆ ಆ ಕಾಲದಲ್ಲಿ ತುಂಬ ಚೆಂದ ಇದ್ದ ದಿನೇಶನಿಗೆ ತನ್ನ ಮಗಳಾದ ಸ್ನೇಹಳನ್ನು ಮದುವೆ ಮಾಡಿಕೊಟ್ಟಿದ್ದ.

ಒಂದೆರಡು ವರ್ಷಕ್ಕೆ ಪರ್ಮನೆಂಟ್ ಆಗ್ತದೆ ಅಂತ ಅವ ಕಾಯ್ತಾ ಕೂತಿದ್ದ. ಆದರೆ, ಅವನ ದುರದೃಷ್ಟ. ಆರೇಳು ವರ್ಷ ಕಳೆದರೂ ಆ ಪೋಸ್ಟ್ ಪರ್ಮನೆಂಟ್ ಆಗ್಻ೇ ಇಲ್ಲ. ಮಾತ್ರ ಅಲ್ಲ, ನಿಮ್ಮ ಕಾಲೇಜಿಗೆ ಹೊಸದಾಗಿ ಪೋಸ್ಟ್‌ಗಳಿಗೆ ಅನುದಾನ ಕೊಡ್ಲಿಕ್ಕೆ ಆಗೂದಿಲ್ಲ. ಹಳೆಯದಕ್ಕೆ ಮಾತ್ರ ಅಂತ ಸರ್ಕಾರ ಹೇಳಿತು. ಇದರಿಂದಾಗಿ ದಿನೇಶ ವಿಲಿವಿಲಿ ಒದ್ದಾಡಿದ. ಸೀನಿಯರ್ ಲೆಕ್ಚರರ್‌ಗಳು ದಿನೇಶನನ್ನು ಒಂದು ನಮೂನಿ ನೋಡ್ಲಿಕ್ಕೆ ಸುರು ಮಾಡಿದ್ರು. 'ಜಾಬ್ ಪರ್ಮನೆಂಟ್ ಆಗ್ತದೆ ಅಂತ ಮದುವೆ ಆದ. ಉದ್ಯೋಗದೊಂದಿಗೆ ಹೆಣ್ಣು ಫ್ರೀ' ಅಂತ ಮಕ್ಕಾರು ಮಾಡ್ತಿದ್ರು. ತಾವು ಯುಜಿಸಿ ಸ್ಯಾಲರಿ ತೆಕ್ಕೊಳ್ಳುವವರು. ಎಷ್ಟೆಂದರೂ ದಿನೇಶ ಮ್ಯಾನೇಜ್‌ಮೆಂಟಿನವರಿಗೆ ದಮ್ಮಯ್ಯ ಹಾಕಿ ಬಂದವ ಅಂತ ಅವರಿಗೆ ತಾತ್ಸಾರ. ಒಂದೆರಡು ಸರ್ತಿ ಪ್ರಿನ್ಸಿಪಾಲ್ ಕೂಡ, 'ನಮ್ಮ ಪೀಡಿಯವರದ್ದೇ ಛಾನ್ಸ್ ಮಾರ್ರೆ. ಯೆಂತ ಆಡಿಸ್ಬೇಕು ಅಂತ ಇಲ್ಲ. ಧರ್ಮಕ್ಕೆ ಸಂಬಳ. ಬೆಳಗ್ಗೆಯಿಂದ ಸಂಜೆವರೆಗೆ ಸುಮ್ಮನೇ ಕೂತ್ರೆ ಆಯ್ತು ಎದ್ದು ಹೋದ್ರೆ ಆಯ್ತು. ಅಷ್ಟೇ ಕತೆ. ಹೆಚ್ಚು ಹೇಳ್ಲಿಕ್ಕೂ ಉಪಾಯ ಇಲ್ಲ. ಮ್ಯಾನೇಜ್‌ಮೆಂಟಿನವರ ಅಳಿಯ ಬೇರೆ' ಅಂತ ಮೀಟಿಂಗಿನಲ್ಲಿ ಹೇಳಿದ್ದರು ಒಂದೆರಡು ಬಾರಿ. ಹಾಗಾಗಿ, ಅವನು ಒಂಟಿಯಾಗಿ ಬಿಟ್ಟಿದ್ದ.

ಈಚೆ ಮನೆಯಲ್ಲಿ ಸಾ ಹೆಂಡತಿಯ ಒಟ್ಟಿಗೆ ಪ್ರೀತಿ, ವಿಶ್ವಾಸದಿಂದ ಬೆರೀಲಿಕ್ಕೆ ಆಗ್ತಾ ಇರ್ಲಿಲ್ಲ. ಮದುವೆಯಾಗಿ ಐದಾರು ವರ್ಷ ದಿನೇಶನ ತಾಯಿ, 'ಯಾವಾಗ ನಾನು ಪುಳ್ಳಿಯನ್ನು ನೋಡುದು?' ಅಂತ ಕೇಳ್ತಾನೆ ಇದ್ರು. ಕೆಲವು ವರ್ಷಗಳ ಅನಂತರ ಆ ಟೆಸ್ಟ್ ಈ ಟೆಸ್ಟ್ ಎಲ್ಲ ಮಾಡಿಸಿಯಾದ ಮೇಲೆ ಸಮಸ್ಯೆ ದಿನೇಶನಲ್ಲೆ ಇರೂದು ಅಂತ ಗೊತ್ತಾಗಿತ್ತು. ಆ ವಿಷಯ ಗೊತ್ತಾದ ಅನಂತರ ಅವ ಮತ್ತೆ ಸಾ ಕೀಳರಿಮೆಯಿಂದ ನರಳಿದ. ಮಾತು ಮಾತಿಗೂ ಸ್ನೇಹಾಳ ಮೇಲೆ ಹಾರಾಡ್ತಿದ್ದ. 'ನನ್ನನ್ನು ಕಾಲೇಜಲ್ಲೂ ಮಕ್ಕಾರ್ ಮಾಡ್ತಾರೆ. ನೀನು ಸಾ ಮಕ್ಕಾರ್ ಮಾಡ್ತಿ' ಅಂತ ಗುರುಗುಡ್ತಿದ್ದ. ಸ್ನೇಹಾ ಮಾತ್ರ ಹೆಸರಿಗೆ ತಕ್ಕ ಹಾಗೇ ಸ್ನೇಹಮಯಿ ಆಗಿಯೇ ಇದ್ದಳು. ಅವನ ಮನಸ್ಸನ್ನು ಓದಬಲ್ಲವಳಾಗಿದ್ದಳು, 'ನಮಿಗೆ ಮಕ್ಕಳಾಗುವುದಿಲ್ಲ ಅಂತ ನಿಮಿಗೆ ಮಂಡೆ ಬಿಸಿ ಯಾಕೆ? ಈಗ ಲೋಕದಲ್ಲಿ ಎಷ್ಟು ಮಂದಿ ಇಲ್ಲ? ನನಿಗೆ ನೀವೇ ಮಗು. ನಿಮಗೆ ನಾನೇ ಮಗು ಆಯ್ತಾ?' ಅಂತ ಅವನನ್ನು ಸಮಾಧಾನ ಮಾಡುತ್ತಿದ್ದಳು. ಆಗೆಲ್ಲ ಅವಳ ಮಡಿಲಲ್ಲಿ ಅವ ಮಗುವಿನಂತೆ ಅಳುತ್ತಿದ್ದ. ಪೇಟೆಯ ಒಂದು ಬಡಾವಣೆಯಿಂದ ಹೊಸತಾಗಿ ಮತ್ತೊಂದು ಬಡಾವಣೆಗೆ ಮನೆಯನ್ನು